# ತಂದೆಯ ಕಣ್ಣೀರಿಗೆ ಓಗೊಟ್ಟ ಉಕ್ರೇನ್



**ಭ್ರಷ್ಟಾಚಾರ ವಿರೋಧಿಸಿ ಹೋರಾಡುವವರ ಮೇಲಿನ ಮಾರಣಾಂತಿಕ ಹಲ್ಲೆ ಉಕ್ರೇನ್‌ನಲ್ಲಿ ಸಾಮಾನ್ಯವಾಗಿದೆ. ಆದರೆ ಇಂಥ ಹಲ್ಲೆಗಳು ಅಲ್ಲಿನ ಹೋರಾಟಗಾರರಿಗೆ ಹೊಸ ಚೈತನ್ಯ ನೀಡುತ್ತಿವೆ. ಅಕ್ರಮಗಳ ವಿರುದ್ಧ ದನಿ ಎತ್ತುವವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ಒಬ್ಬರ ಬಲಿದಾನ ಹತ್ತು ಜನರು ಬೀದಿಗಿಳಿಯಲು ಪ್ರೇರಣೆ.**

**■ ಘನಶ್ಯಾಮ ಡಿ.ಎಂ.**

'ಮುದ್ದಿನ ಮಗಳಿಲ್ಲದೆ ಒಂದು ವರ್ಷ ಕಳೆದುಬಿಟ್ಟೆ, ಅಯ್ಯೋ ನಾನೆಂಥ ಅಪ್ಪಾ?'

ಉಕ್ರೇನ್‌ನ ಕೀವ್ ನಗರದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಗಳನ್ನು ನೆನಪಿಸಿಕೊಂಡು ಅಪ್ಪ ವಿಕ್ಟರ್ ಹ್ಯಾಂಡ್‌ಝ್ಯುಕ್ ಬಿಕ್ಕಿಬಿಕ್ಕಿ ಅಳುತ್ತಿದ್ದರು.

'ಒಂದು ವರ್ಷದಿಂದ ಯಾರ ಬಳಿ ತೋಡಿಕೊಂಡರೂ ಕಡಿಮೆಯಾಗದ ನೋವು, ದುಃಖ, ಒಂಟಿತನಗಳ ಭಾರ ಹೊತ್ತಿದ್ದೇನೆ. ಇದು ಸಾಕಷ್ಟು ಜನರು ಕೊಟ್ಟ ಭರವಸೆಗಳು, ದೊಡ್ಡದೊಡ್ಡ ಹೇಳಿಕೆಗಳು ನಿರರ್ಥಕ ಎನಿಸಿದ ವರ್ಷವೂ ಹೌದು' ಎಂದು ಹೇಳುವಾಗ ವಿಕ್ಟರ್ ಕಣ್ಣೀರು ಧಾರೆಯಾಗಿತ್ತು.

ಹಿನ್ನೆಲೆಯಲ್ಲಿದ್ದ ಸ್ಕ್ರೀನ್‌ನಲ್ಲಿ ಅವರ 33ರ ಹರೆಯದಲ್ಲಿ ಮೃತಪಟ್ಟ ಮಗಳು, ಭ್ರಷ್ಟಾಚಾರ ವಿರೋಧಿ ಹೋರಾಟಗಾರ್ತಿ ಕಟರ್‌ಯಾನಾ ಹ್ಯಾಂಡ್‌ಝ್ಯುಕ್‌ರ ಸಾಧನೆ ಬಿಂಬಿಸುವ ವಿಡಿಯೊ ತುಣುಕುಗಳು ಪ್ಲೇ ಆಗುತ್ತಿದ್ದವು.

2018ರ ಜುಲೈ 31ರಂದು ಕಟರ್‌ಯಾನಾ ಇನ್ನೇನು ಕಾರ್ ಹತ್ತಬೇಕು ಎನ್ನುವಾಗ ಅವರ ಮೇಲೆ ಸುಮಾರು ಒಂದು ಲೀಟರ್‌ನಷ್ಟು ಸಲ್ಫರಿಕ್ ಆಸಿಡ್ ಸುರಿಯಲಾಯಿತು. ಆರು ತಿಂಗಳಲ್ಲಿ ಹತ್ತಾರು ಶಸ್ತ್ರಚಿಕಿತ್ಸೆಗಳಿಗೆ ಒಳಪಟ್ಟ ಕಟರ್‌ಯಾನಾ ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದರು. ಸಾಯುವ ಮೊದಲು ತನ್ನ ಸಾವಿನ ಷಡ್ಯಂತ್ರ ಇಂಥವರು ರೂಪಿಸಿರಬಹುದು ಎಂಬ ಅನುಮಾನವನ್ನೂ ದಾಖಲಿಸಿದ್ದರು.

ಪೊಲೀಸರ ಲಂಚಗುಳಿತನದಿಂದ ಮರಗಳ್ಳರ ಅಕ್ರಮಗಳವರೆಗೆ ಹತ್ತಾರು ಪ್ರಕರಣಗಳನ್ನು ಕಟರ್‌ಯಾನಾ ಬಯಲಿಗೆಳೆದಿದ್ದರು. ಇಂಥ ಲಂಚಕೋರರು ಮತ್ತು ಅಪರಾಧಿಗಳೊಂದಿಗೆ ನಂಟಿರುವ ಮಂಗರ್ ವ್ಲಾಡ್ಯಾಸ್ಲಾವ್ ನನ್ನ ಹತ್ಯೆಗೆ ಸಂಚು ರೂಪಿಸಿದ್ದವ, ಅವನೇ ಕೊಲೆಗಾರರಿಗೆ ಸುಪಾರಿ ಕೊಟ್ಟವ ಎನ್ನುವುದು ಕಟರ್‌ಯಾನಾ ಅನುಮಾನ. ಕೀವ್ ನಗರದ ಪ್ರಾದೇಶಿಕ ಕಚೇರಿಯ ಅಧಿಕಾರಿ ಮೇಲೆ ಕೇಳಿ ಬಂದ ಆರೋಪದ ಬಗ್ಗೆ ಪೊಲೀಸರು ತಲೆಕೆಡಿಸಿಕೊಳ್ಳಲಿಲ್ಲ.

ಆಸಿಡ್ ದಾಳಿಯ ಬಗ್ಗೆ ಗೂಂಡಾಗಿರಿ ಪ್ರಕರಣದ ದಾಖಲಿಸಿ ಕೈಗೆ ಸಿಕ್ಕವರನ್ನು ಬಂಧಿಸಿ ಎಲ್ಲ ಮುಗಿಯಿತು ಎಂದು ಬೀಗಿದರು. ಆದರೆ ಪೊಲೀಸರು ಬಂಧಿಸಿದ್ದ ವ್ಯಕ್ತಿ ಕೇವಲ ಒಂದೇ ತಿಂಗಳಲ್ಲಿ ನಿರಪರಾಧಿ ಎಂದು ಹೊರಬಂದ. ಇತ್ತ ಕಟರ್‌ಯಾನಾ ಸಾವಿನ ಆಕ್ರೋಶ ಉಕ್ರೇನ್‌ನ ಮೂಲೆಮೂಲೆಗಳಲ್ಲಿ ಪ್ರತಿಧ್ವನಿಸಿತು. ಒತ್ತಡ ಹೆಚ್ಚಾದ ನಂತರ ಕೊಲೆ ಯತ್ನ ಪ್ರಕರಣ ದಾಖಲಿಸಿದ ಪೊಲೀಸರು ಮತ್ತೂ ಐವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಬಹುತೇಕರಿಗೆ ಐದು ವರ್ಷ ಶಿಕ್ಷೆಯೇನೋ ಆಯಿತು.

ಆಸಿಡ್ ಸುರಿದು ಕೊಂದವರಿಗೆ ಶಿಕ್ಷೆಯಾಯಿತು. ಆದರೆ ಆಸಿಡ್ ಸುರಿಯಲು ಹೇಳಿಕೊಟ್ಟವರಿಗೆ, ಅದಕ್ಕಾಗಿ ನೂರಾರು ಡಾಲರ್ ಕೂಲಿ ಕೊಟ್ಟವರಿಗೆ, ಪ್ಲಾನ್ ರೂಪಿಸಿ ಅದನ್ನು ಇಂಚಿಂಚಾಗಿ ವಿವರಿಸಿ




ಕೊಲ್ಲಲು ಪ್ರೇರಣೆ ಕೊಟ್ಟವರಿಗೆ ಏನೂ ಆಗಿಲ್ಲವಲ್ಲ ಎಂದು ಉಕ್ರೇನ್ ಜನರು ಇದೀಗ ಬೀದಿಗಿಳಿದಿದ್ದಾರೆ.

2014ರ ನಂತರ ಉಕ್ರೇನ್‌ನಲ್ಲಿ ಇಂಥ ಹತ್ತಾರು ಪ್ರಕರಣಗಳು ವರದಿಯಾಗಿವೆ. ಪರಿಸರ ಹೋರಾಟಗಾರ ಮೈಕೊಲಾ ಬೈಚ್ಕೊ ಜೂನ್ 2018ರಲ್ಲಿ ಕೊಲೆಯಾಗಿದ್ದರು. ಕಳೆದ ಜನವರಿಯಲ್ಲಿ ವಡ್ಯಾಮ್ ಕೊಮರೊವ್ ಎಂಬ ಪತ್ರಕರ್ತನ ಮೇಲೆ ಮಾರಣಾಂತಿಕ ಹಲ್ಲೆಯಾಗಿತ್ತು. ಆರು ತಿಂಗಳು ನರಳಿ ಜೂನ್‌ನಲ್ಲಿ ಅವರು ಮೃತಪಟ್ಟರು. ಇವರಿಬ್ಬರ ಕೊಲೆಗಳ ರಹಸ್ಯಗಳನ್ನು ಭೇದಿಸಲು ಅಲ್ಲಿನ ತನಿಖಾ ಸಂಸ್ಥೆಗಳಿಗೆ ಈವರೆಗೂ ಸಾಧ್ಯವಾಗಲಿಲ್ಲ.

'ಸಾಮಾಜಿಕ ಕಾರ್ಯಕರ್ತರ ಮೇಲಿನ ಹಲ್ಲೆಗಳನ್ನು ನಾನು ಸಹಿಸಲ್ಲ. ಅಂಥವರನ್ನು ಪತ್ತೆ ಹಚ್ಚಿ ಶಿಕ್ಷೆ ಕೊಡ್ತೀವಿ' ಎಂಬ ಅಧ್ಯಕ್ಷ ಝೆಲೆನ್‌ಸ್ಕಿ ಇದೀಗ ದೇಶಕ್ಕೆ ಭರವಸೆ ಕೊಟ್ಟಿದ್ದಾರೆ. ಆದರೆ ಅದನ್ನು ನಂಬುವ ಸ್ಥಿತಿಯಲ್ಲಿ ಅಲ್ಲಿನ ಜನರಿಲ್ಲ.

'ಹೂ ಕಿಲ್ಡ್ ಕಟರ್‌ಯಾನಾ ಹ್ಯಾಂಡ್‌ಝ್ಯುಕ್' ಎಂಬ ಪ್ರಶ್ನೆಯೇ ಈ ಒಂದು ದೊಡ್ಡ ಆಂದೋಲನವಾಗಿ ಉಕ್ರೇನ್‌ನ ಬೀದಿಬೀದಿಗಳಲ್ಲಿ ಅನುರಣಿಸುತ್ತಿದೆ. ಎದೆಯೆತ್ತರ ಬೆಳೆದ ಮಗಳನ್ನು ಕಳೆದುಕೊಂಡ ತಂದೆಯ ಕಣ್ಣೀರಿಗೆ ಇಡೀ ದೇಶ ಓಗೊಟ್ಟಿದೆ. ಅಕ್ರಮಗಳ ವಿರುದ್ಧ ದನಿ ಎತ್ತುವ ಸಾಮಾಜಿಕ ಕಾರ್ಯಕರ್ತರು ಮತ್ತು ತನಿಖಾ ವರದಿ ಬರೆಯುವ ಪತ್ರಕರ್ತರಿಗೆ ಭದ್ರತೆ ಒದಗಿಸಬೇಕು, ಹತ್ಯೆ ಸಂಚು ರೂಪಿಸುವ ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂಬ ಕೂಗು ದೊಡ್ಡ ದನಿಯಲ್ಲಿ ಕೇಳಿ ಬರುತ್ತಿದೆ. ■